**ಪಾಠ–2** **ಜನವರಿ 2–8**

# ನಾಯಕತ್ವದ ಬಿಕ್ಕಟ್ಟು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಯೆಶಾಯ 6:1–4, ಯೆಶಾಯ 6:5–7, ಯೆಶಾಯ 6:8, ಯೆಶಾಯ 6:9–13 ವಚನಗಳು.

**ಸ್ಮರಣವಾಕ್ಯ : "ಅರಸನಾದ ಉಜ್ಜೀಯನು ಕಾಲವಾದ ವರುಷದಲ್ಲಿ ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವುದನ್ನು ಕಂಡೆನು. ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು"** (ಯೆಶಾಯ 6:1).

ಒಂದು ಉತ್ತಮವಾದ ಸರ್ಕಾರವು ಯಾವ ಅಂಶಗಳಿಂದ ಕೂಡಿರಬೇಕೆಂದು ಶಿಷ್ಯರಲ್ಲೊಬ್ಬನು ತನ್ನ ಗುರುವಾದ ಕನ್‌ಫೂಷಿಯಸ್‌ನನ್ನು ಕೇಳಿದಾಗ ಆತನು ಹೀಗೆ ಉತ್ತರಿಸುತ್ತಾನೆ: "**ಸಾಕಷ್ಟು ಆಹಾರ, ಸಾಕಷ್ಟು ಅಸ್ತ್ರಗಳು ಮತ್ತು ಸಾಮಾನ್ಯ ಜನರ ವಿಶ್ವಾಸ**".

'ಆದರೆ, ಒಂದು ವೇಳೆ ಈ ಮೂರರಲ್ಲಿ ಒಂದನ್ನು ಬಿಟ್ಟು ಉಳಿದ ಎರಡನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಸಂದರ್ಭ ಬಂದಾಗ ಏನನ್ನು ಬಿಡಬೇಕು?' ಎಂದು ಶಿಷ್ಯನು ಗುರುವನ್ನು ಕೇಳುತ್ತಾನೆ. ಅದಕ್ಕೆ 'ಅಸ್ತ್ರಗಳು' ಎಂಬುದಾಗಿ ಗುರುವು ಉತ್ತರ ಕೊಡುತ್ತಾನೆ.

---

* ಜನವರಿ 9ರ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.

ಆತನ ಶಿಷ್ಯನು ಮತ್ತೂ ಮುಂದುವರೆದು ಒಂದು ವೇಳೆ ಉಳಿದ ಎರಡು ಅಂಶಗಳಲ್ಲಿ ಯಾವುದನ್ನು ಬಿಟ್ಟು ಬಿಡಬಹುದು ಎಂದು ಕೇಳಿದಾಗ ಗುರುವು 'ಆಹಾರ' ಎಂದು ಹೇಳುತ್ತಾನೆ.

ಆಹಾರವಿಲ್ಲದಿದ್ದರೆ ಮನುಷ್ಯರು ಜೀವಿಸುವುದಕ್ಕಾಗುವುದಿಲ್ಲ. ಆದರೆ ಜನರ ವಿಶ್ವಾಸವನ್ನು ಕಳೆದುಕೊಂಡು ಸರ್ಕಾರವು ಉಳಿಯುವುದೆಲ್ಲ ಇಲ್ಲವೆಂದು ಹೇಳುತ್ತಾನೆ.

ಜನರಿಗೆ ಬಲವಾದ, ವಿಶ್ವಾಸಾರ್ಹ ನಾಯಕತ್ವ ಬೇಕೇಬೇಕು. ಒಬ್ಬ ಸೈನಿಕನು ಸೇನೆಯ ಸೇವೆಯಿಂದ ನಿವೃತ್ತಿಯಾದ ಮೇಲೂ ಎರಡನೆಯ ಅವಧಿಗೆ ಸೇನೆಯನ್ನು ಸೇರಲು ಸಹಿ ಮಾಡುತ್ತಿದ್ದಾಗ ಸೈನಿಕರನ್ನು ನೇಮಕ ಮಾಡಿಕೊಳ್ಳುತ್ತಿದ್ದ ಅಧಿಕಾರಿಯು ಆ ಸೈನಿಕನನ್ನು ಯಾಕೆ ನೀನು ಮತ್ತೆ ಸೈನಿಕನಾಗುವುದಕ್ಕೆ ಬಂದಿರುವೆ ಎಂದು ಕೇಳುತ್ತಾರೆ.

ಅದಕ್ಕೆ ಸೈನಿಕನು "**ನಾನು ನಾಗರೀಕ ಜೀವನವನ್ನು ನಡೆಸಲು ಪ್ರಯತ್ನ ಪಟ್ಟೆನು. ಆದರೆ ಅಲ್ಲಿ ನಿವೃತ್ತಿಯೆಂಬುದೇ ಇಲ್ಲ. ಯಾವಾಗಲೂ ಜವಾಬ್ದಾರಿ ನಾಗರೀಕನ ಮೇಲೆ ಇದ್ದೇ ಇರುತ್ತದೆ**" ಎಂದು ಹೇಳಿದನು.

ಈ ವಾರ ಯೂದಾಯದ ನಾಯಕತ್ವದ ಬಿಕ್ಕಟ್ಟನ್ನು ಮತ್ತು ಅದರ ದುಃಖಕರವಾದ ಫಲಿತಾಂಶಗಳನ್ನು ತಿಳಿದುಕೊಳ್ಳುತ್ತೇವೆ.

**ಭಾನುವಾರ** **ಜನವರಿ 3**

## ಅರಸನು ಮರಣಹೊಂದಿದನು. ಅರಸನು ಅಮರನಾಗಲಿ!

ಯೆಶಾಯ 6:1 ಅರಸನಾದ ಉಜ್ಜೀಯನ ಮರಣದ ಬಗ್ಗೆ ಹೇಳುತ್ತದೆ. 2 ಪೂರ್ವಕಾಲ ವೃತ್ತಾಂತ 26ನೇ ಅಧ್ಯಾಯವನ್ನು ಓದಿದ ಮೇಲೆ ಈ ಪ್ರಶ್ನೆಗೆ ಉತ್ತರ ಹೇಳಿರಿ; ಅರಸನಾದ ಉಜ್ಜೀಯನ ಮರಣದ ವಿಶೇಷತೆ (ಮಹತ್ವ) ಏನು?

ಅರಸನ ಮರಣದ ವಿಷಯದಲ್ಲಿ ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳಬಹುದು.

1) ಉಜ್ಜೀಯನ ದೀರ್ಘವಾದ ಆಳ್ವಿಕೆಯಲ್ಲಿ ದೇಶವು ಸಮೃದ್ಧವಾಗಿತ್ತು. ಆದರೆ ಆತನು ಬಲಿಷ್ಠನಾದ ಮೇಲೆ ಗರ್ವಿಷ್ಠನಾಗಿ ಭ್ರಷ್ಟನಾದನು; ತನ್ನ ದೇವರಾದ ಯೆಹೋವನಿಗೆ ದ್ರೋಹಿಯಾಗಿ ಧೂಪವೇದಿಯ ಮೇಲೆ ತಾನೇ ಧೂಪ ಹಾಕಬೇಕೆಂದು ಯಹೋವನ ಆಲಯಕ್ಕೆ ಹೋದನು (2 ಪೂ.ವೃ. 26:16). ಆತನು ಯಾಜಕ ಸೇವೆಗೆ ಪ್ರತಿಷ್ಠಿತನಾದ ಆರೋನನ ಸಂತಾನದಲ್ಲವನಾದುದರಿಂದ ಯಾಜಕರು ಅವನನ್ನು ಧೂಪ ಹಾಕದಂತೆ ತಡೆದಾಗ ಆತನು ಯಾಜಕರ ಮೇಲೆ ಕೋಪಗೊಂಡನು (2 ಪೂ.ವೃ.26:18). ಅರಸನು ಯಾಜಕರ ಗದರಿಕೆಯನ್ನು ನಿರಾಕರಿಸಿದಾಗ ದೇವರು ಆತನಿಗೆ ಕುಷ್ಠ ರೋಗವನ್ನು ಬರಮಾಡಿದನು. ಉಜ್ಜೀಯನು ಜೀವದಿಂದಿರುವವರೆಗೂ ಕುಷ್ಠ ರೋಗಿಯಾಗಿದ್ದು ಯೆಹೋವನ ಆಲಯಕ್ಕೆ ಬಾರದಂತೆ ಬಹಿಷ್ಕೃತನಾದನು. ಅವನು ಕುಷ್ಠದ ದೆಸೆಯಿಂದ ಪ್ರತ್ಯೇಕವಾದ ಮನೆಯಲ್ಲಿ ವಾಸಿಸಬೇಕಾಯಿತು (2 ಪೂ.ವೃ.26:21). ಹೀಗೆ ಭ್ರಷ್ಟ ಮನುಷ್ಯನಾದ ಅರಸನು ಮರಣ ಹೊಂದಿದ ವರುಷದಲ್ಲಿ ಯೆಶಾಯನು ಪರಿಶುದ್ಧನು, ಅಮರನು ದಿವ್ಯ ಅರಸನೂ ಆದ ದೇವರನ್ನು ದರ್ಶನದಲ್ಲಿ ನೋಡಿದುದು ಎಂಥಾ ವಿಪರ್ಯಾಸವಾದುದ್ದಾಗಿದೆ.

2) ಯೆಶಾಯನಿಗೂ ಅರಸನಾದ ಉಜ್ಜೀಯನಿಗೂ ಎದ್ದುಕಾಣುವ ವ್ಯತ್ಯಾಸವಿದೆ. ಉಜ್ಜೀಯನಾದರೋ ಗರ್ವಿಷ್ಠನಾಗಿ ಪರಿಶುದ್ಧ ಆಲಯವನ್ನು ಹೊಕ್ಕು ಅಶುದ್ಧನಾಗಿ ಎಂದೆಂದು ಆಲಯಕ್ಕೆ ಬಾರದಂತೆ ಬಹಿಷ್ಕೃತನಾದನು. ಆದರೆ ಯೆಶಾಯನು ದೇವರ ಪರಿಶುದ್ಧ ಸಾನಿಧ್ಯಕ್ಕೆ ಪ್ರವೇಶಿಸಿದನು. ತನ್ನ ಬಲಹೀನತೆಯನ್ನು ಒಪ್ಪಿಕೊಂಡು ದೀನತೆಯಿಂದ ನೀತಿಯ ಪರಿಶುದ್ಧತೆಗಾಗಿ ಹಂಬಲಿಸಿದನು ಮತ್ತು ಅದನ್ನು ಪಡೆದುಕೊಂಡನು (ಯೆಶಾಯ 6:5–7). ಆತನು ಯೇಸುಕ್ರಿಸ್ತನ ಸಾಮ್ಯದಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ಮನೆಗೆ ಹೋದ ಸುಂಕದವನಂತೆ ಆದನು. **"ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು"** (ಲೂಕ 18:14).

3) ಉಜ್ಜೀಯನ ಕುಷ್ಠ ಹತ್ತಿದ ದೇಹಕ್ಕೂ ಇಸ್ರಾಯೇಲ್ ಜನರ ನೈತಿಕ ಪರಿಸ್ಥಿತಿಗೂ ಎದ್ದು ಕಾಣುವ ಸಾಮ್ಯತೆ ಇತ್ತು. "**ತಲೆಯೆಲ್ಲಾ ರೋಗ ಹೃದಯವೆಲ್ಲಾ ದುರ್ಬಲ ಅಂಗಾಲಿನಿಂದ ನಡುನೆತ್ತಿಯ ತನಕ ಪೆಟ್ಟುಬಾಸುಂಡೆ ಮಾಗದ ಗಾಯಗಳೇ ಹೊರತು ಏನೂ ಸೌಖ್ಯವಿಲ್ಲ**" (ಯೆಶಾಯ 1:6).

4) ಸುಮಾರು ಕ್ರಿ.ಪೂ. 745ರಲ್ಲಿ ಉಜ್ಜೀಯನು ಕಾಲವಾದನು. ಆ ವರುಷವು ದೇವಜನರ ನಾಯಕವದಲ್ಲಿ ತಲೆದೋರಿದ ದೊಡ್ಡಬಿಕ್ಕಟ್ಟನ್ನು ದಾಖಲಿಸುತ್ತದೆ. ದೇಶದ ಸಂಪೂರ್ಣ ಆಡಳಿತವನ್ನು ನಡೆಸುತ್ತಿದ್ದ ಅರಸನು ಮರಣ ಹೊಂದಿದಾಗ ಮತ್ತೊಬ್ಬನು ಅಧಿಕಾರಕ್ಕೆ ಬರುವವರೆಗೂ ಆ ದೇಶವು ಅಪಾಯದಲ್ಲಿರುತ್ತದೆ. ಆದರೆ ಯೂದಾಯವು ಒಂದು ವಿಶೇಷವಾದ ಅಪಾಯಕ್ಕೆ ಗುರಿಯಾಗಿತ್ತು. ಯಾಕೆಂದರೆ ಮೂರನೇ ತಿಗ್ಲತ್-ಪಿಲೇಸರನು ಅಶ್ಶೂರ್ಯ ಸಿಂಹಾಸನವನ್ನು ಕೆಲವು ವರ್ಷಗಳ ಹಿಂದೆಯಷ್ಟೆ ಅಂದರೆ ಕ್ರಿ.ಪೂ. 745ರಲ್ಲಿ ಏರಿದ್ದನು. ಸಿಂಹಾಸನ ಏರಿದಾಗಲೇ ಯುದ್ಧದಲ್ಲಿ ತೊಡಗಿಸಿಕೊಂಡು ಯಾರು ಜೈಸಲಾಗದ ದೊಡ್ಡಶಕ್ತಿಯಾಗಿ ಹೊರಹೊಮ್ಮಿದನು. ಮೂಡಣ ದೇಶಗಳ ಪ್ರತ್ಯೇಕ ಅಸ್ತಿತ್ವಕ್ಕೆ ಅಪಾಯ ಒಡ್ಡಿದನು. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ದೇವರು ಯೆಶಾಯನಿಗೆ ಸರ್ವವೂ ತನ್ನ ನಿಯಂತ್ರಣದಲ್ಲಿದೆಯೆಂದು ತೋರಿಸಿ ಆತನನ್ನು ಧೈರ್ಯಪಡಿಸಿದನು.

2 ಪೂರ್ವಕಾಲ ವೃತ್ತಾಂತ 26:16ನ್ನು ಜಾಗ್ರತೆಯಿಂದ ಓದಿರಿ. ನಮ್ಮಲ್ಲಿ ಪ್ರತಿಯೊಬ್ಬರು ಯಾವ ತೆರನಾಗಿ ಇಂತಹುದನ್ನೇ ಎದುರಿಸುವ ಸಾಧ್ಯತೆಯಿರುತ್ತದೆ? ಅಂತಹ ಅಪಾಯಕ್ಕೆ ಗುರಿಯಾಗದ ಹಾಗೆ ಕ್ರಿಸ್ತನ ಶಿಲುಬೆಯಲ್ಲಿ ನೆಲೆಗೊಂಡು ನಮ್ಮನ್ನು ನಾವು ಹೇಗೆ ರಕ್ಷಿಸಿಕೊಳ್ಳಬಹುದು?

**ಸೋಮವಾರ** **ಜನವರಿ 4**

## ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು

ಯೆಶಾಯ 6ನೇ ಅಧ್ಯಾಯದ ಮೊದಲನಾಲ್ಕು ವಚನಗಳಲ್ಲಿ ಏನು ನಡೆಯುತ್ತಿದೆಯೆಂದು ಗಮನಿಸಿರಿ. ಅರಸನು ರಾಜಕೀಯದ ದೊಡ್ಡ ಗಲಭೆಯ

(ಸಂಘರ್ಷ) ಸನ್ನಿವೇಶದಲ್ಲಿ ಸಾಯುತ್ತಾನೆ. ಆವಾಗ ಎಲ್ಲವೂ ಯಾರ ನಿಯಂತ್ರಣದಲ್ಲಿ ಇದೆಯೆಂಬ ಖಾತ್ರಿಯಿಲ್ಲದೆ ಯೆಶಾಯನು ಭಯಗೊಂಡಿದ್ದನು.

ನಂತರ ಏನು ನಡೆಯುತ್ತದೆ? ಯೆಶಾಯನು ದರ್ಶನದಲ್ಲಿ ದೇವರು ಮಹಾಪ್ರಭಾವದಲ್ಲಿ ಉನ್ನತೋನ್ನತ ಸಿಂಹಾಸನರೂಢನಾಗಿರುವುದನ್ನು ಕಾಣುತ್ತಾನೆ. ಆತನ ಸುತ್ತಲೂ ಉರಿಯುತ್ತಿರುವ ಸೆರಾಫಿಯರು ಸೇನಾಧೀಶ್ವರನಾದ ಯೆಹೋವನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು ಕೂಗುವಾಗ ಆ ಶಬ್ದಕ್ಕೆ ದ್ವಾರದ ಅಸ್ತಿವಾರವು ಕದಲುವುದನ್ನೂ ಧೂಮವು ಮಂದಿರದಲ್ಲೆಲ್ಲಾ ತುಂಬುವುದನ್ನು ನೋಡುತ್ತಾನೆ. ಇದನ್ನು ಕಂಡು ಯೆಶಾಯನಿಗೆ ಬೆರಗಾಗಿರುತ್ತದೆ. ಈವಾಗ ನಿಶ್ಚಯವಾಗಿಯೂ ಯೆಶಾಯನು ಸರ್ವವೂ ಯಾರ ನಿಯಂತ್ರಣದಲ್ಲಿದೆ ಎಂಬುದನ್ನು ತಿಳಿದುಕೊಳ್ಳುತ್ತಾನೆ.

ಕರ್ತನು ಈ ದರ್ಶನದಲ್ಲಿ ಎಲ್ಲಿರುತ್ತಾನೆ? (ಯೆಶಾಯ 6:1ನ್ನು ನೋಡಿರಿ). ಯಾಕೆ ಕರ್ತನು ಇತರರಿಗೆ ಕಾಣಿಸಿಕೊಂಡದ್ದಕ್ಕಿಂತ ಭಿನ್ನವಾಗಿ ಯೆಶಾಯನಿಗೆ ಕಾಣಿಸಿಕೊಂಡನು? (ವಿ.ಕಾಂಡ 25:8, ವಿ.ಕಾಂಡ 40:34–38 ವಚನಗಳನ್ನು ನೋಡಿರಿ).

ಯೆಹೆಜ್ಕೇಲನು, ದಾನಿಯೇಲನು ಮತ್ತು ಯೋಹಾನನು ತಮ್ಮ ದೇಶದಿಂದ ಹೊರಗಡೆ ಗಡೀಪಾರಾಗಿದ್ದಾಗ ದರ್ಶನಗಳನ್ನು ಹೊಂದಿದರು (ಯೆಹೆಜ್ಕೇಲ 1ನೇ ಅಧ್ಯಾಯ, ದಾನಿಯೇಲ 7:9,10 ಮತ್ತು ಪ್ರಕಟನೆಗಳು 4,5). ಲೋಕದ ಸ್ಥಿತಿ ಕೆಟ್ಟುಹೋಗಿದ್ದರೂ ದೇವರು ಸರ್ವವನ್ನು ತನ್ನ ನಿಯಂತ್ರಣದಲ್ಲಿಟ್ಟು-ಕೊಂಡಿದ್ದಾನೆಂಬ ಆದರಣೆ ಮತ್ತು ಧೈರ್ಯವು ಯೆಶಾಯನಿಗೆ ಬೇಕಾಗಿದ್ದಂತೆಯೇ ಯೆಹೆಜ್ಕೇಲ ದಾನಿಯೇಲ ಯೋಹಾನನಿಗೂ ಬೇಕಾಗಿತ್ತು (ಯೆಹೆಜ್ಕೇಲ ಮತ್ತು ದಾನಿಯೇಲರು ತಮ್ಮ ದೇಶವನ್ನು ನಾಶಪಡಿಸಿದ ಅನ್ಯದೇಶದಲ್ಲಿ ಸೆರೆಯಾಳುಗಳಾಗಿದ್ದರು ಮತ್ತು ಯೋಹಾನನು ಒಂದು ನಿರ್ಜನವಾದ ದ್ವೀಪದಲ್ಲಿ

ಗಡಿಪಾರಾಗಿದ್ದನು). ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ನಂಬಿಗಸ್ತರಾಗಿ ಉಳಿಯಲು ಅಗತ್ಯವಾದ ಸಹಾಯವು ಅವರಿಗೆ ದರ್ಶನಗಳಿಂದ ನಿಸ್ಸಂದೇಹವಾಗಿ ಸಿಕ್ಕಿತು.

"ಯೆಶಾಯನು ದರ್ಶನದಲ್ಲಿ ದೇವರನ್ನು ಮಹಾಪ್ರಭಾವದಲ್ಲಿ ಮತ್ತು ಮಹಿಮೆಯಲ್ಲಿ ಕಂಡಾಗ ಆತನು ದೇವರು ಸಮಕ್ಷಮದಲ್ಲಿರುವ ಪವಿತ್ರತೆಯ ಪ್ರಜ್ಞೆಯಿಂದ ಪರವಶನಾದನು. ಸಾಟಿಯಿಲ್ಲದ ತನ್ನ ಸೃಷ್ಟಿಕರ್ತನ ಪರಿಪೂರ್ಣತೆಗೂ ಬಹಳ ಕಾಲದಿಂದ ದೇವರಿಗೆ ಸ್ವಕೀಯ ಜನಾಂಗವೆಂದು ಎಣಿಸಲ್ಪಟ್ಟ ಇಸ್ರಾಯೇಲ್ ಮತ್ತು ಯೂದಾಯ ಜನರ ಪಾಪದ ಜೀವಿತಕ್ಕೂ ಎಂಥಾ ವ್ಯತ್ಯಾಸ!" – ಎಲೆನ್ ಜಿ ವೈಟಮ್ಮನವರ "**ಪ್ರವಾದಿಗಳು ಮತ್ತು ರಾಜರುಗಳು**" ಎಂಬ ಪುಸ್ತಕದಲ್ಲಿ 307ನೇ ಪುಟ.

ಗ್ರಹಿಕೆಗೆ ಮೀರಿದ ದೇವರ ಪರಿಶುದ್ಧತೆಯೇ ಯೆಶಾಯನು ಕಂಡ ದರ್ಶನದಲ್ಲಿರುವ ಸಂದೇಶದ ಮೂಲಾಂಶವಾಗಿದೆ. ದೇವರು ಪರಿಶುದ್ಧನಾದ ದೇವರಾಗಿರುವುದರಿಂದ ತನ್ನ ಜನರಿಂದಲೂ ಪರಿಶುದ್ಧತೆಯನ್ನು ಬಯಸುತ್ತಾನೆ. ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ತಮ್ಮ ಕೆಟ್ಟತನವನ್ನು ಬಿಟ್ಟು ಆತನ ಕಡೆಗೆ ತಿರುಗಿಕೊಂಡು ಯಾರು ತಮ್ಮನ್ನು ನಂಬಿಕೆಯಿಂದಲೂ ವಿಧೇಯತೆಯಿಂದಲೂ ಆತನಿಗೆ ಒಪ್ಪಿಸಿಕೊಡುತ್ತಾರೋ ಅಂಥವರಿಗೆ ತನ್ನ ಪರಿಶುದ್ಧತೆಯನ್ನು ದೇವರು ಕೊಡುತ್ತಾನೆ.

ನಮ್ಮಲ್ಲಿ ಎಲ್ಲರೂ ಧೈರ್ಯಗೆಡಿಸುವ ಸನ್ನಿವೇಶಗಳನ್ನು ಎದುರಿಸಿರುತ್ತೇವೆ, ಆವಾಗ ಎಲ್ಲವೂ ಮುಗಿದೆ ಹೋಯಿತು ಎಂದು ಭಾಸವಾಗುತ್ತದೆ. ಯೆಶಾಯನ ಹಾಗೆ ದೇವರು ಮಹಾಪ್ರಭಾವದಲ್ಲಿರುವ ದರ್ಶನವನ್ನು ನೀವು ಕಂಡಿಲ್ಲದಿದ್ದರೂ ದೇವರು ನಿಮ್ಮನ್ನು ಮತ್ತು ನಿಮ್ಮ ನಂಬಿಕೆಯನ್ನು ಇಕ್ಕಟ್ಟಿನ ಸಂದರ್ಭಗಳಲ್ಲಿ ಕಾಪಾಡಿದ ರೀತಿಯನ್ನು ಎಣಿಸಿರಿ. ಇತರರೊಂದಿಗೆ ಹಂಚಿಕೊಳ್ಳಬಹುದಾದ ಯಾವ ಪಾಠಗಳನ್ನು ಇಂತಹ ಅನುಭವಗಳಿಂದ ಕಲಿತಿರುವಿರಿ?

**ಮಂಗಳವಾರ** **ಜನವರಿ 5**

## ಹೊಸವ್ಯಕ್ತಿತ್ವ (ಯೆಶಾಯ 6:5–7)

ಮಹಾದೋಷಪರಿಹಾರಕ ದಿನದಂದು ದೇವದರ್ಶನದ ಗುಡಾರದ ಮಹಾ ಪರಿಶುದ್ಧ ಸ್ಥಳಕ್ಕೆ ಮಹಾಯಾಜಕನು ಮಾತ್ರ ಪ್ರವೇಶ ಮಾಡಬೇಕಾಗಿತ್ತು. ಆತನು ತನ್ನ ರಕ್ಷಣೆಗಾಗಿ ತನ್ನ ಸುತ್ತಲೂ ಧೂಪದ ಹೊಗೆಯು ಕವಿಯುವಂತೆ ಮಾಡಿಕೊಂಡು ಅಲ್ಲಿಗೆ ಹೋಗಬೇಕಾಗಿತ್ತು. ಇಲ್ಲದಿದ್ದರೆ ಸತ್ತುಹೋಗುತ್ತಿದ್ದನು (ಯಾ.ಕಾಂಡ 16:2,12,13). ಯೆಶಾಯನು ಮಹಾಯಾಜಕನಲ್ಲದಿದ್ದರೂ ಕರ್ತನನ್ನು ನೋಡಿದನು ಯೆಶಾಯನು ಧೂಪ ಸುಡದಿದ್ದರೂ ಮಂದಿರವು ಧೂಪದ ಹೊಗೆಯಿಂದ (ಧೂಮ) ತುಂಬಿತ್ತು (ಯೆಶಾಯ 6:4). ಇದು ಮಹಾದೋಷ ಪರಿಹಾರಕ ದಿನದಂದು ದೇವರು ಮೇಘದಲ್ಲಿ ಕಾಣಿಸಿಕೊಳ್ಳುತ್ತಿದ್ದನ್ನು ನೆನಪಿಗೆ ತರುತ್ತದೆ (ಯಾ.ಕಾಂಡ 16:2). ಯೆಶಾಯನು ಭಯದಿಂದ ನಾನು ನಾಶವಾದೆನಲ್ಲ ಎಂದುಕೊಳ್ಳುತ್ತಾನೆ (ಯಾ.ಕಾಂಡ 33:20 ಮತ್ತು ನ್ಯಾಯಸ್ಥಾಪಕರು 6:22,23ನ್ನು ಹೋಲಿಸಿ ನೋಡಿರಿ). ಯೆಶಾಯನು ತನ್ನನ್ನು ಹೊಲಸು ತುಟಿಯವನು, ಪಾಪಿಯೆಂದು ಮತ್ತು ತನ್ನ ಜನರು ಕೂಡ ಪಾಪಿಗಳೆಂದು ಒಪ್ಪಿಕೊಳ್ಳುತ್ತಾನೆ (ಯೆಶಾಯ 6:5). ಇದು ಮಹಾಯಾಜಕನು ಮಹಾದೋಷಪರಿಹಾರಕ ದಿನದಂದು ಮಾಡಿಕೊಳ್ಳುತ್ತಿದ್ದ ಪಾಪದ ಅರಿಕೆಯನ್ನು ನೆನಪಿಸುತ್ತದೆ (ಯಾ.ಕಾಂಡ 16:21). ಯಾಜಕರು ದೇವದರ್ಶನ ಗುಡಾರದ ಒಳಪ್ರಾಕಾರದಲ್ಲಿ ದೇವರ ಸಮ್ಮುಖದ ಪ್ರಕಾಶವಾದ ಬೆಳಕಿನಲ್ಲಿ ನಿಂತಿರುವಂತೆ ಯೆಶಾಯನು ನಿಂತಿರುವಾಗ ಆತನಿಗೆ ನೇಮಿಸಿದ ಕಾರ್ಯವನ್ನು ಸಾಧಿಸಲಾರದ ಅಯೋಗ್ಯತೆ ಮತ್ತು ಕೊರತೆಯ ಅರಿವಾಯ್ತು"– ಎಲೆನ್ ಜಿ ವೈಟಮ್ಮನವರ "**ಪ್ರಮಾದಗಳು ಮತ್ತು ಅರಸರು**" ಎಂಬ ಪುಸ್ತಕದ 308ನೇ ಪುಟ.

ಸೆರಾಫಿಯರಲ್ಲಿ ಒಬ್ಬನು ಯಜ್ಞವೇದಿಯಿಂದ ತಂಡದಲ್ಲಿ ತೆಗೆದ ಕೆಂಡವನ್ನು ಯೆಶಾಯನ ತುಟಿಗಳಿಗೆ ಮುಟ್ಟಿಸಿ ಅವನನ್ನು ಶುದ್ಧೀಕರಿಸಿದನು ಯಾಕೆ? (ಯೆಶಾಯ 6:6,7).

ಆ ಸೆರಾಫಿಯನು ಇಗೋ ಇದು ನಿನ್ನ ತುಟಿಗಳಿಗೆ ತಗಲಿತು; ನಿನ್ನ ದೋಷವು ನೀಗಿತು, ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು ಎಂದು ಯೆಶಾಯನಿಗೆ ಹೇಳುತ್ತಾನೆ (ಯೆಶಾಯ 6:7). ಇಲ್ಲಿ ಯೆಶಾಯನ ಪಾಪವು ಯಾವುದೆಂದು ತಿಳಿಸಿಲ್ಲ, ಅವನ ತುಟಿಗಳ ಬಗ್ಗೆ ಹೇಳುವಾಗ ಅದು ಆಡುವ ಕೆಟ್ಟಮಾತುಗಳಿಗೆ ಸೀಮಿತವಾಗಿರದೆ ಅದನ್ನು ಆಡಿದ ಸಂಪೂರ್ಣ ವ್ಯಕ್ತಿಯ ಬಗ್ಗೆ ಹೇಳುತ್ತದೆ. ಯೆಶಾಯನು ನೈತಿಕವಾದ ಶುದ್ಧೀಕರಣೆ ಹೊಂದಲಾಗಿ ಆತನು ದೇವರನ್ನು ಪರಿಶುದ್ಧತೆಯಿಂದ ಕೊಂಡಾಡಲು ಸಾಧ್ಯವಾಯ್ತು.

ಬೆಂಕಿಯು ಶುದ್ಧೀಕರಿಸುವ ಕಾರ್ಯಕರ್ತೃವಾಗಿದೆ. ಯಾಕೆಂದರೆ ಅದು ಅಶುದ್ಧತ್ವವನ್ನು ಸುಟ್ಟುಹಾಕುತ್ತದೆ (ಅರಣ್ಯಕಾಂಡ 31:23ನ್ನು ನೋಡಿರಿ) ಸೆರಾಫಿಯನು ಯೆಶಾಯನ ತುಟಿಗೆ ಮುಟ್ಟಿಸಿದ ಕೆಂಡವು ಯಜ್ಞವೇದಿಯಿಂದ ತೆಗೆದುಕೊಂಡಿದ್ದು, ಅದು ಎಂದೆಂದಿಗೂ ಉರಿಯುತ್ತಿರಬೇಕೆಂದು ಸ್ವತಃ ದೇವರೇ ಅದನ್ನು ಹಚ್ಚಿದ್ದನು (ಯಾ.ಕಾಂಡ 6:12). ಹಾಗಾಗಿ ಸೆರಾಫಿಯನು ಯೆಶಾಯನನ್ನು ಶುದ್ಧ ಮಾಡಿದನು ಮಾತ್ರವಲ್ಲದೆ ಪವಿತ್ರಗೊಳಿಸಿದನು. ಇದಕ್ಕಿಂತಲೂ ಹೆಚ್ಚಿನ ವಿಷಯವೇನೆಂದರೆ ದೇವದರ್ಶನ ಗುಡಾರದಲ್ಲಿ ಆರಾಧನೆ ಮಾಡುವಾಗ ಯಜ್ಞವೇದಿಯಿಂದ ಕೆಂಡವನ್ನು ಮುಖ್ಯವಾಗಿ ಧೂಪವನ್ನು ಸುಡಲು ತೆಗೆದುಕೊಳ್ಳಲಾಗುತ್ತದೆ. ಯಾಜಕಕಾಂಡ 16:12,13ರ ಜೊತೆಗೆ ಹೋಲಿಸಿರಿ. ಮಹಾಯಾಜಕನು ಯಜ್ಞವೇದಿಯಿಂದ ಧೂಪಾರತಿಯ ತುಂಬ ಕೆಂಡವನ್ನು ತೆಗೆದುಕೊಂಡು ಧೂಪ ಸುಡಲು ಬಳಸುತ್ತಿದ್ದನು. ಯೆಶಾಯ 6ನೇ ಅಧ್ಯಾಯದಲ್ಲಿ ಸೆರಾಫಿಯನು ಕೆಂಡ ತೆಗೆದುಕೊಂಡು ಧೂಪಹಾಕಲಿಲ್ಲ. ಆದರೆ ಯೆಶಾಯನ ತುಟಿಗಳಿಗೆ ಮುಟ್ಟಿಸಲು ಉಪಯೋಗಿಸಿದನು. ಉಜ್ಜೀಯನ್ನು ಧೂಪಸುಡಲು ಪ್ರಯತ್ನಪಟ್ಟನು, ಆದರೆ ಯೆಶಾಯನು ಆ ಧೂಪದಂತೆ ಆದನು. ಯಾವ ರೀತಿ ಪವಿತ್ರವಾದ ಕೆಂಡವು ಧೂಪವನ್ನು ಸುಡುವಾಗ ದೇವಾಲಯದಲ್ಲಿ ಪವಿತ್ರವಾದ ಧೂಮ ತುಂಬಿಕೊಳ್ಳುತ್ತದೆಯೋ ಹಾಗೆಯೇ ಯೆಶಾಯನು ಪವಿತ್ರವಾದ ಸಂದೇಶವನ್ನು ಹರಡುವಂತೆ ಅವನ ತುಟಿಗಳಿಗೆ ಮುಟ್ಟಿಸಲ್ಪಟ್ಟಿತು. ಯೆಶಾಯ 6:8ರಲ್ಲಿ ದೇವರು ಯೆಶಾಯನನ್ನು ತನ್ನ ಜನರ ಬಳಿಗೆ ಹೋಗುವಂತೆ ಕಳುಹಿಸಿದನು.

ದೇವರ ದರ್ಶನವಾದಾಗ ಯೆಶಾಯನ ಪ್ರತಿಕ್ರಿಯೆಯನ್ನು ಯೆಶಾಯ 6:54ಅಲ್ಲಿ ಪ್ರಾರ್ಥನಾಪೂರ್ವಕವಾಗಿ ಓದಿರಿ. ಪರಿಶುದ್ಧನಾಗಿರುವ ದೇವರು ಸೃಷ್ಟಿಸಿರುವ ಈ ಲೋಕದಲ್ಲಿ ಪಾಪಿಗಳಾದ ಮನುಷ್ಯರು ಹೇಗೆ ತುಂಬಿಕೊಂಡರು ಎಂಬುದೇ ಸಮಸ್ಯೆಯ ಮೂಲ. ಇದನ್ನು ಇಲ್ಲಿ ಹೇಗೆ ವ್ಯಕ್ತಪಡಿಸಲಾಗಿದೆ? (ಯೆಶಾಯ 6:3).

ಶಿಲುಬೆಯ ಮೇಲೆ ತೂಗುತ್ತಿರುವ ಕ್ರಿಸ್ತನು ಮಾತ್ರ ಈ ಸಮಸ್ಯೆಗೆ ಪರಿಹಾರವಾಗಿದ್ದಾನೆ ಏಕೆ? ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಶಿಲುಬೆಯಲ್ಲಿ ಏನು ನಡೆಯಿತು?

**ಬುಧವಾರ** **ಜನವರಿ 6**

## ರಾಜಾಜ್ಞೆ / ರಾಜಾದೇಶ (ಯೆಶಾಯ 6:8)

"ಆಗ, ಯಾವನನ್ನು ಕಳುಹಿಸಲಿ, ಯಾವನು ನಮಗೋಸ್ಕರ ಹೋಗುವನು ಎಂಬ ಕರ್ತನ ನುಡಿಯನ್ನು ಕೇಳಿ, ಇಗೋ, ನಾನಿದ್ದೇನೆ, ನನ್ನನ್ನು ಕಳುಹಿಸು ಅಂದೆನು" (ಯೆಶಾಯ 6:8).

ದೇವರು ತನ್ನ ಸಂದೇಶವನ್ನು ತನ್ನ ಪರವಾಗಿ ಜನರಿಗೆ ಕೊಡಲು ಯಾರನ್ನು ಕಳುಹಿಸಲಿ ಎಂಬ ಕರೆಗೆ ಯೆಶಾಯನು ಶುದ್ಧೀಕರಿಸಲ್ಪಟ್ಟವನಾಗಿ ಕೂಡಲೇ ಓಗೊಟ್ಟನು. ಹೊಸ ಒಡಂಬಡಿಕೆಯ ಭಾಷೆಯಲ್ಲಿ ಯೆಶಾಯನನ್ನು ಅಪೋಸ್ತಲನೆಂದು ಎಂದರೆ "ಕಳುಹಿಸಲ್ಪಟ್ಟವನು" ಎಂದು ಕರೆಯಬಹುದಾಗಿದೆ.

ಸಾಕಷ್ಟು ಆಸಕ್ತಿಕರವಾದ ವಿಷಯವೇನೆಂದರೆ ಯೆಶಾಯನ ಪುಸ್ತಕವು ಇತರೆ ಪ್ರವಾದನೆ ಪುಸ್ತಕಗಳಂತೆ ಪ್ರವಾದಿಯು ಕರೆಯಲ್ಪಡುವಿಕೆಯೊಂದಿಗೆ ಆರಂಭವಾಗುವುದಿಲ್ಲ (ಯೆರೆ 1:4–10, ಯೆಹೆಜ್ಕೇಲನು 1–3ನ್ನು ಹೋಲಿಸಿರಿ). ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈಗಾಗಲೇ ಅಂದರೆ 6ನೇ ಅಧ್ಯಾಯದಲ್ಲಿರುವ ಘಟನೆಗಳು ನಡೆಯುವ ಮೊದಲೇ ಯೆಶಾಯನು ಪ್ರವಾದಿಯೆಂದು ಹೆಸರು ಪಡೆದುಕೊಂಡವನಾಗಿರಲಿಲ್ಲ. ದೈವೀಕ ಪ್ರವೇಶವು ಪ್ರವಾದಿಯನ್ನು ದೈವಸೇವೆಯು ಆರಂಭವಾದ ಮೇಲೂ ಉತ್ತೇಜನ ಮಾಡುತ್ತದೆಯೆಂದು ಸತ್ಯವೇದವು ತೋರಿಸುತ್ತದೆ (ಮೋಶೆ ವಿ.ಕಾಂಡ 34;

ಎಲೀಯ 1 ಅರಸುಗಳು 19). ಬೇರೆ ಬೇರೆ ನಿದರ್ಶನಗಳಲ್ಲೂ (ಉದಾಹರಣೆಗಳು) ವ್ಯತಿರಿಕ್ತವಾಗಿ ದೇವರು ಜನರ ಮಧ್ಯೆ ಪ್ರವಾದಿಗಳೆನಿಸಿಕೊಂಡವರನ್ನು ಕರೆದನು. ಆದರೆ ಯೆಶಾಯ 6ನೇ ಅಧ್ಯಾಯದಲ್ಲಿ ಯೆಶಾಯನೇ ತನ್ನನ್ನು ದೇವರ ವಿಶೇಷವಾದ ಕಾರ್ಯಕ್ಕೆ ಸ್ವಇಚ್ಛೆಯಿಂದ ಒಪ್ಪಿಸಿ ಕೊಡುತ್ತಾನೆ. ಯೆಶಾಯ 1 ರಿಂದ 5 ಅಧ್ಯಾಯಗಳು ಯೆಶಾಯನನ್ನು ಮೊದಲು ಕರೆದ ಸಂದರ್ಭದಲ್ಲಿ ಜನರ ಪರಿಸ್ಥಿತಿಯು ಹೇಗಿತ್ತು ಎಂಬುದನ್ನು ತಿಳಿಸುತ್ತವೆ, ಅನಂತರ ಕೂಡಲೇ ತನ್ನ ಕಾರ್ಯವನ್ನು ಮಾಡಲು ಯೆಶಾಯನಿಗೆ ಆಲಯದಲ್ಲಿ ಉತ್ತೇಜನ ಕೊಟ್ಟು ಆತನನ್ನು ಪ್ರವಾದನೆ ನುಡಿಯುವ ವಕ್ತಾರನನ್ನಾಗಿ ಮಾಡಿ ತನ್ನ ಆದೇಶವನ್ನು ದೃಢಪಡಿಸಿದನು.

ದೇವರು ಯೆಶಾಯನಿಗೆ ತನ್ನ ಆಲಯದಲ್ಲಿ ಉತ್ತೇಜನ ಕೊಟ್ಟನು. ಸತ್ಯವೇದದಲ್ಲಿ ದೇವರು ಪ್ರವಾದಿಗಳಿಗೆ ಉತ್ತೇಜನ ಕೊಡಲು ತನ್ನ ಆಲಯವನ್ನು ಉಪಯೋಗಿಸಿದ ಉದಾಹರಣೆಗಳಿವೆಯೇ? ಓದಿರಿ ಕೀರ್ತನೆಗಳು 73 (ನೋಡಿರಿ ಕೀರ್ತ 73:17, ಇಬ್ರಿ 10:19–23 ಮತ್ತು ಪ್ರಕ 5). ಈ ವಚನಗಳು ನಮಗೆ ಏನು ಹೇಳುತ್ತವೆ?

ದೇವದರ್ಶನ ಗುಡಾರವು ಎದೆಬಡಿತವನ್ನು ಹೆಚ್ಚಿಸುವ ಬಲಪ್ರಭಾವದ ಸ್ಥಳವು ಮಾತ್ರವಲ್ಲ ಆದರೆ ಅದು ನಮ್ಮಂತಹ ಬಲಹೀನ ಮತ್ತು ತಪ್ಪಿತಸ್ಥ ಜನರು ಆಶ್ರಯಪಡೆದುಕೊಳ್ಳುವ ಸ್ಥಳವೂ ಆಗಿತ್ತು. ಮಹಾಯಾಜಕನಾದ ಕ್ರಿಸ್ತನ ಮೂಲಕ ದೇವರು ನಮ್ಮನ್ನು ರಕ್ಷಿಸುತ್ತಾನೆಂಬ ಅರಿವು ನಮ್ಮನ್ನು ದೃಢಪಡಿಸುತ್ತದೆ.

ನಮಗಾಗಿ ವಧಿಸಲ್ಪಟ್ಟ ಕುರಿಮರಿಯನ್ನು ಪ್ರತಿನಿಧಿಸುವ ಕ್ರಿಸ್ತನನ್ನು ಪ್ರಕಟೆಗಾರನಾದ ಯೋಹಾನನು ನೋಡಿದನು (ಪ್ರಕ 5:6). ಈ ದೃಶ್ಯವು ಸುಂದರವಾದ ನೋಟವಾಗಿರಲಿಲ್ಲ. ಈ ವಿವರಣೆಯು ಯೇಸುಕ್ರಿಸ್ತನು ಸತ್ತವರಿಂದ ಎಬ್ಬಿಸಲ್ಪಟ್ಟನು ಮತ್ತು ಪರಲೋಕಕ್ಕೆ ಏರಿಸಲ್ಪಟ್ಟನು ಎಂಬ ಅಂಶವನ್ನು ತಿಳಿಸುವುದಾಗ್ಯೂ ಆತನು ನಿರಂತರವಾಗಿ ಶಿಲುಬೆಯನ್ನು ಹೊರುವವನಾಗಿದ್ದಾನೆ. ಆತನು ಎಲ್ಲಾ ಜನರನ್ನು ತನ್ನೆಡೆಗೆ ಎಳೆದುಕೊಳ್ಳುವುದಕ್ಕಾಗಿ ಎತ್ತಲ್ಪಟ್ಟಿದ್ದಾನೆ.

ನಾವು ಪರಲೋಕದಲ್ಲಿರುವ ದೇವರ ಆಲಯವನ್ನೂ ನಂಬಿಕೆಯಿಂದಲೂ

ಪ್ರಾರ್ಥನೆಯಿಂದಲೂ ಪ್ರವೇಶಿಸುವಾಗ ನಮಗೆ ಹೇಗೆ ಉತ್ತೇಜನ ಸಿಗುತ್ತದೆ? ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರುವಂತೆ ನಮ್ಮನ್ನು ಆಹ್ವಾನಿಸುತ್ತಾನೆ (ಇಬ್ರಿಯ 4:16). ಅಗತ್ಯದ ಸಮಯದಲ್ಲಿ ಹೇಗೆ ಕೃಪೆಯನ್ನೂ ಕರುಣೆಯನ್ನೂ ಹೊಂದಿದಿರಿ ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ನೀವು ಅದಕ್ಕೆ ಹೇಗೆ ಪ್ರತಿಕ್ರಿಯಿಸುವಿರಿ?

**ಗುರುವಾರ** **ಜನವರಿ 7**

## ಭಯಹುಟ್ಟಿಸುವ ಮನವಿ (ಯೆಶಾ6:9–13)

ದೇವರು ಯೆಶಾಯನಿಗೆ ಮರು ಆದೇಶ ನೀಡಿದಾಗ ಒಂದು ವಿಚಿತ್ರವಾದ ಸಂದೇಶವನ್ನು ತನ್ನ ಜನರಿಗೆ ತಿಳಿಸಲು ಪ್ರವಾದಿಗೆ ಕೊಟ್ಟನು ಏಕೆ? (ಯೆಶಾ 6:9,10).

ಯೆಶಾಯನಿಗೆ ದೇವರು ಕೊಟ್ಟ ಸಂದೇಶವು ತಪ್ಪು ಎಂತಾಗಲೀ ಅಷ್ಟೇನು ಮುಖ್ಯವಲ್ಲವೆಂತಾಗಲಿ ಯಾಕೆ ಭಾವಿಸಬಾರದು, ಸ್ವತಃ ಯೇಸುಕ್ರಿಸ್ತನೇ ಈ ವಚನಗಳನ್ನು ಉದಾಹರಿಸಿ ತಾನು ಯಾರ ಸಾಮ್ಯರೂಪದಲ್ಲಿ ಬೋಧಿಸುತ್ತೇನೆಂದು ಶಿಷ್ಯರಿಗೆ ತಿಳಿಸುತ್ತಾನೆ (ಮತ್ತಾಯ 13:13–15).

ಯಾರೂ ನಾಶವಾಗಬಾರದೆಂಬುದು ದೇವರ ಚಿತ್ತವಾಗಿದೆ (2 ಪೇತ್ರ 3:9) ಆದುದರಿಂದಲೇ ದೇವರು ಯೂದಾಯದ ಜನರನ್ನು ರಕ್ಷಿಸಲು ಯೆಶಾಯನನ್ನು ಕಳುಹಿಸಿದಂತೆ ಇಡೀ ಲೋಕದ ಜನರನ್ನು ರಕ್ಷಿಸಲು ಯೇಸುಕ್ರಿಸ್ತನನ್ನು ಕಳುಹಿಸಿದನು. ಯಾರೂ ನಾಶವಾಗಬಾರದು. ಆದರೆ ಎಲ್ಲರೂ ನಿತ್ಯಜೀವ (ರಕ್ಷಣೆ) ಹೊಂದಬೇಕೆಂಬುದೇ ದೇವರ ಬಯಕೆಯಾಗಿದೆ. ಆದರೆ ಕೆಲವರು ದೇವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ. ಮತ್ತೆ ಕೆಲವರು ದೃಢವಾಗಿ ವಿರೋಧಿಸುತ್ತಾರೆ. ಆದಾಗ್ಯೂ ದೇವರು ಅಂಥವರಿಗೆ ಪಶ್ಚಾತ್ತಾಪ ಹೊಂದುವ ಸಲುವಾಗಿ ಹೆಚ್ಚು ಹೆಚ್ಚು ಅವಕಾಶಗಳನ್ನು ಕೊಡುವುದರ ಮೂಲಕ ಅವರನ್ನು ಮನವೊಲಿಸುತ್ತಾ ಹೋಗುತ್ತಾನೆ. ಆದರೆ ಅವರು ದೇವರ ಮನವಿಗೆ ಓಗೊಡದೆ ಅದನ್ನು ಹೆಚ್ಚು ವಿರೋಧಿಸುತ್ತಾ ಹೋದಂತೆ ಹೆಚ್ಚು ಕಠಿಣರಾಗಿ ಬಿಡುತ್ತಾರೆ.

ಅವರ ಹೃದಯಗಳನ್ನು ಮೃದುಗೊಳಿಸುವ ಸಲುವಾಗಿ ದೇವರು ಈ ಎಲ್ಲಾ ಕ್ರಿಯೆಗಳನ್ನು ಮೂಡಿದಾಗ್ಯೂ ಇವುಗಳಿಂದ ಮೃದುವಾಗುವ ಬದಲು ಕಠಿಣರಾಗಿ ಹೋಗುತ್ತಾರೆ. ಈ ಅರ್ಥದಲ್ಲಿ ದೇವರು ಅವರಿಗೆ ಏನು ಮಾಡುತ್ತಾನೋ ಅದರ ಫಲಿತಾಂಶದಿಂದ ಕಠಿಣರಾಗುತ್ತಾರೆ ಎನ್ನಬಹುದು. ನಮ್ಮ ಮೇಲೆ ದೇವರಿಗಿರುವ ಪ್ರೀತಿಯು ಯಾವಾಗಲೂ ಬದಲಾಗುವುದೇ ಇಲ್ಲ. ಆತನ ಪ್ರೀತಿಗೆ ಪ್ರತಿಯಾಗಿ ವ್ಯಕ್ತಿಯು ತೋರಿಸುವ ಪ್ರತಿಕ್ರಿಯೆಯು ಒಂದೇಯಾಗಿರುವುದಿಲ್ಲ. ವ್ಯಕ್ತಿಯು ಮಾಡುವ ಆಯ್ಕೆಯ ಮೇಲೆ ಅವಲಂಬಿತವಾಗಿರುತ್ತದೆ.

ಮೋಶೆ, ಯೆಶಾಯ, ಯೆರೆಮೀಯ, ಯೆಹೆಜ್ಕೇಲ ಮುಂತಾದ ದೇವಸೇವಕರು ಜನರಿಗೆ ಕೆಟ್ಟದ್ದನ್ನು ಬಿಟ್ಟು ಒಳ್ಳೆಯದನ್ನು ಮಾಡಬೇಕೆಂದು ಮನವಿ ಮಾಡುತ್ತಾ ಹೋದರು, ಯೇಸುಕ್ರಿಸ್ತನು ಕೂಡ ಹಾಗೆಯೇ ಮಾಡಿದನು. ಅವರು ಕೊಡುವ ಸಂದೇಶವನ್ನು ಜನರು ಸ್ವೀಕರಿಸಲಿ ಅಥವಾ ತಿರಸ್ಕರಿಸಲಿ ಮನವಿ ಮಾಡುವುದನ್ನು ನಿಲ್ಲಿಸುವುದಿಲ್ಲ. ದೇವರು, ಯೆಹೆಜ್ಕೇಲನಿಗೆ "ಅವರು ನನಗೆ ಎದುರು ಬೀಳುವವರಾಗಿದ್ದಾರೆ. ಆದುದರಿಂದ ಅವರು ನಿನ್ನ ಮಾತನ್ನು ಕೇಳಲಿ ಅಥವಾ ಬಿಡಲಿ ನೀನು ಮಾತ್ರ ಹೇಳುವುದನ್ನು ನಿಲ್ಲಿಸಬೇಡ. ಆವಾಗ ಅವರು ನಿನ್ನನ್ನು ತಮ್ಮ ಮಧ್ಯೆದಲ್ಲಿ ಪ್ರವಾದಿ ಎದ್ದಿದ್ದಾನೆಂದು ತಿಳಿದುಕೊಳ್ಳುವರು" ಎಂದು ಹೇಳಿದನು (ಯೆಹೆಜ್ಕೇಲ 2:5). ಜನರಿಗೆ ಸಾಕಷ್ಟು ಎಚ್ಚರಿಕೆಯನ್ನು ಕೊಡುವ ಸಲುವಾಗಿ ದೇವರು ಮತ್ತು ದೇವರ ಸೇವಕರು ಅವರ ಮುಂದೆ ಒಳ್ಳೆಯ ಆಯ್ಕೆಯನ್ನು ಇಡುತ್ತಾರೆ (ಯೆಹೆಜ್ಕೇಲ 3:16–21ನ್ನು ಹೋಲಿಸಿರಿ). ಕಡೆಗೆ ಜನರು ನಾಶನ ಮತ್ತು ಗಡಿಪಾರನ್ನು ಆಯ್ಕೆ ಮಾಡಿಕೊಂಡರೂ ಮಾಡಿಕೊಳ್ಳಬಹುದು (ಯೆಶಾಯ 6:11–13).

ಮೇಲಿನ ವಿಚಾರಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ಫರೋಹನು ತನ್ನ ಹೃದಯವನ್ನು ಕಠಿಣಪಡಿಸಿಕೊಂಡುದುದರಲ್ಲಿ ದೇವರ ಪಾತ್ರವನ್ನು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ? ವಿಮೋಚನಕಾಂಡ 4:21ರಲ್ಲಿ ದೇವರು ಫರೋಹನ ಹೃದಯುವನ್ನು ಕಠಿಣಪಡಿಸುವೆನಾದುದರಿಂದ ಅವನು ಜನರನ್ನು ಹೋಗಗೊಡಿಸುವುದಿಲ್ಲವೆಂದು ಬರೆದಿದೆ. ದೇವರು ಹೀಗೆಯೇ ಒಂಭತ್ತು ಸಲ ಈ ಮಾತನ್ನು ಆಡುತ್ತಾನೆ, ಮೇಲೆ ಹೇಳಿರುವುದು ಮೊದಲನೆ ಸಲದ ಮಾತು.

ಆದರೆ ಸ್ವತಃ ಫರೋಹನ ತನ್ನ ಹೃದಯವನ್ನು ಒಂಭತ್ತು ಸಲವೂ ತನ್ನ ಹೃದಯವನ್ನು ಕಠಿಣ ಪಡಿಸಿಕೊಳ್ಳುತ್ತಾನೆ (ಉದಾಹರಣೆಗೆ ವಿ.ಕಾಂಡ 8:15,32 ಮತ್ತು ವಿ.ಕಾಂಡ 9:34ನ್ನು ನೋಡಿರಿ).

ಫರೋಹನು ನಿಚ್ಚಳವಾಗಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿದ್ದನು ಇಲ್ಲದಿದ್ದರೆ ಅವನು ತನ್ನ ಹೃದಯವನ್ನು ಕಠಿಣಪಡಿಸಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಆದರೆ ದೇವರೂ ಸಹ ಫರೋಹನ ಹೃದಯವನ್ನು ಕಠಿಣಪಡಿಸಿದನು ಎಂಬುದು ಸತ್ಯ ದೇವರು ಫರೋಹನಿಗೆ ಆಯ್ಕೆ ಮಾಡಿಕೊಳ್ಳುವ ಸಂದರ್ಭಗಳನ್ನು ಅಂದರೆ ದೇವರು ಮಾಡಿದ ಸೂಚಕ ಕಾರ್ಯಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಸಂದರ್ಭಗಳನ್ನು ಒದಗಿಸಿದನು ಎಂಬ ಸತ್ಯವನ್ನು ಸೂಚಿಸುತ್ತದೆ. ಒಂದುವೇಳೆ ಫರೋಹನು ದೇವರ ಸೂಚಕ ಕಾರ್ಯಗಳಿಗೆ ತನ್ನ ಹೃದಯವನ್ನು ತೆರೆದಿದ್ದ ಪಕ್ಷದಲ್ಲಿ ಹೃದಯವು ಕಠಿಣವಾಗುತ್ತಿರಲಿಲ್ಲ ಮೃದುವಾಗಿರುತ್ತಿತ್ತು.

ನಿಮ್ಮ ಸ್ವಂತ ಅನುಭವದಲ್ಲಿ ನೀವು ಯಾವಾಗಲಾದರೂ ನಿಮ್ಮ ಹೃದಯವನ್ನು ಪವಿತ್ರಾತ್ಮನಿಗೆ ವಿರೋಧವಾಗಿ ಕಠಿಣ ಮಾಡಿಕೊಂಡಿದ್ದೀರಾ? ಯಾವುದರಿಂದ ಹಾಗೆ ಆಯ್ತು ಎಂಬುದನ್ನು ಚೆನ್ನಾಗಿ ಆಲೋಚಿಸಿರಿ. ಆ ಪರಿಕಲ್ಪನೆಯು ನಿಮ್ಮನ್ನು ಆವಾಗ ಭಯಪಡಿಸಿದಂತೆ ಅನ್ನಿಸಿರಲಿಲ್ಲ (ಹೃದಯವನ್ನು ಕಠಿಣಪಡಿಸಿಕೊಳ್ಳುವುದು ಭಯಪಡದಿರುವುದು ತಾನೆ). ಆದರೆ ಈವಾಗ ಅದನ್ನು ಹೇಗೆ ಪರಿಗಣಿಸುವಿರಿ? ಇದರಿಂದ ಪಾರಾಗುವ ದಾರಿ ಯಾವುದು? (1 ಕೊರಿಂಥ 10:13ನ್ನು ನೋಡಿರಿ).

**ಶುಕ್ರವಾರ** **ಜನವರಿ 8**

**ಹೆಚ್ಚಿನ ಚಿಂತನೆಗಾಗಿ :** ಪಾಪಕೃತ್ಯಗಳು ಎಲ್ಲಾ ವರ್ಗದ ಜನರಲ್ಲಿ ಬಹಳವಾಗಿ ವ್ಯಾಪಿಸಿರಲು ದೇವರಿಗೆ ನಿಷ್ಠರಾಗಿ ಉಳಿದಿರುವ ಕೆಲವರು ಬಹಳ ಸಲ ಅಂಜಿಕೆಗೆ ಎಡೆಕೊಟ್ಟು ಹತಾಶರಾಗುವಂತೆ ಶೋಧನೆಗೆ ಒಳಗಾಗುತ್ತಾರೆ. ಇಸ್ರಾಯೇಲ್ಯರು ವಿಫಲರಾಗಿ, ಬಂಡಾಯವೆದ್ದ ಜನಾಂಗವಾಗಿ ಸೊದೋಮ್ ಮತ್ತು ಗೊಮೋರದಂತೆಯೇ ಕಷ್ಟಪಡಬೇಕೆಂಬುದು ದೇವರು ಉದ್ದೇಶಿಸಿದ್ದನು ಎಂಬಂತೆ ಅನ್ನಿಸುತ್ತದೆ.

"ಅಂತಹ ಪರಿಸ್ಥಿತಿಯನ್ನು ಎದುರುಸುತ್ತಿರುವಾಗ ಉಜ್ಜೀಯನ ಆಳ್ವಿಕೆಯ ಕಡೆಯ ವರ್ಷದಲ್ಲಿ ಯೆಶಾಯನು ದೇವರ ಎಚ್ಚರಿಕೆಯ ಮತ್ತು ತಿದ್ದುಪಾಟಿನ ಸಂದೇಶಗಳನ್ನು ಯೂದಾಯದವರಿಗೆ ಸಾರುವ ಸಲುವಾಗಿ ಕರೆಯಲ್ಪಟ್ಟನು. ಆದರೆ ಆತನು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿದನು. ತಾನು ಮೊಂಡ ಜನರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆಂದು ಯೆಶಾಯನಿಗೆ ಚೆನ್ನಾಗಿ ತಿಳಿದಿತ್ತು. ಯೆಶಾಯನು ಯಾರಿಗಾಗಿ ದುಡಿಯಬೇಕಾಗಿತ್ತೋ ಅವರ ಅಪನಂಬಿಕೆ ಮತ್ತು ಮೊಂಡುತನವನ್ನು ಆಲೋಚಿಸಿಕೊಂಡು ಪರಿಸ್ಥಿತಿಯನ್ನು ನಿಭಾಯಿಸಲು ತಾನು ಅಶಕ್ತನು ಎಂಬುದನ್ನು ಮನಗಂಡಂತೆ ಈ ಕೆಲಸವು ಅವನಲ್ಲಿ ಹತಾಶೆ ಮೂಡಿಸಿತು.

ಈ ಹತಾಶೆಯಿಂದ ದೇವರು ನೇಮಿಸಿದ ಕಾರ್ಯವನ್ನು ತ್ಯಜಿಸಿ ಯೂದಾಯನನ್ನು ಅದರ ವಿಗ್ರಹಾರಾಧನೆಗೆ ಅಡ್ಡಿಯಾಗದೆ ಹಾಗೆ ಬಿಟ್ಟುಬಿಡುವುದೆ? ಪರಲೋಕದ ದೇವರಿಗೆ ಪ್ರತಿಯಾಗಿ ನಿನವೆಯ ದೇವತೆಗಳು ಆಳ್ವಿಕೆ ಮಾಡಬೇಕೆ?" – ಎಲೆನ್ ಜಿ ವೈಟಮ್ಮನವರ **'ಪ್ರವಾದಿಗಳು ಮತ್ತು ಅರಸುಗಳು'** ಎಂಬ ಪುಸ್ತಕದಲ್ಲಿ ಪುಟ 306 ಮತ್ತು 307.

## ಚರ್ಚಿಸಬೇಕಾದ ಪ್ರಶ್ನೆಗಳು

1. ಯಾವನಾದರೂ ನಾಸ್ತಿಕನು ಅಥವಾ ದೇವರಲ್ಲಿ ಸಂಶಯಪಡುವನು. ನಿಮ್ಮನ್ನು "ದೇವರು ಎಲ್ಲದರ ಹೊಣೆ ಹೊತ್ತಿದ್ದಾನೆಂಬುದನ್ನು ಹೇಗೆ ತೋರಿಸುವಿರಿ" ಎಂದು ಸವಾಲು ಮಾಡಿದರೆ ಅದಕ್ಕೆ ನಿಮ್ಮ ಉತ್ತರವೇನಾಗಿರುತ್ತದೆ?

2. ಎಲ್ಲವೂ ದೇವರ ನಿಯಂತ್ರಣದಲ್ಲಿರುತ್ತಿದ್ದರೆ ಮುಗ್ಧ ಜನರು ಕಷ್ಟಪಡುತ್ತಾರೆ ಯಾಕೆ? ಯೆಶಾಯ 1:19 ಮತ್ತು 20ನೇ ವಾಕ್ಯದ ಪ್ರಕಾರ ದೇವರಿಗೆ ವಿಧೇಯರಾದ ಜನರಿಗೆ ಒಳ್ಳೆಯದು ಮಾತ್ರ ಆಗಬೇಕು ಮತ್ತು ಅವಿಧೇಯರಿಗೆ ಕೆಟ್ಟದು ಮಾತ್ರ ಆಗಬೇಕು ಎಂದು ಅರ್ಥಕೊಡುತ್ತದೆಯೇ? (ಯೋಬ 1, 2ನೇ ಅಧ್ಯಾಯಗಳು, ಕೀರ್ತನೆಗಳು 37 ಮತ್ತು ಕೀರ್ತನೆ 73ನೇ ಅಧ್ಯಾಯಗಳೊಂದಿಗೆ ಹೋಲಿಸಿರಿ).

ದೇವರ ಸ್ವಭಾವವು ಎಂಥದ್ದು ಎಂದು ಅರಿತವರಾಗಿ ಜನರಿಗೆ ಕೆಟ್ಟದ್ದು ಸಂಭವಿಸುವಾಗ ನಾವು ಹೇಗೆ ಸಮಾಧಾನದಲ್ಲಿರಬಹುದು? ಹಾಗೆ ಇರುವುದು ನಮಗೆ ಅವಶ್ಯಕವೆ?

3. ಯೆಶಾಯ 6ನೇ ಅಧ್ಯಾಯದಲ್ಲಿ ಮಹಾದೋಷಪರಿಹಾರಕ ದಿನಕ್ಕೆ ಅನೇಕ ಸಂಬಂಧಗಳಿವೆ ಏಕೆ? ಈ ಒಂದು ವಾರ್ಷಿಕ ನ್ಯಾಯವಿಚಾರಣೆಯ ದಿನದಂದು ದೇವರು ತನಗೆ ನಿಷ್ಠರಾದ ಜನರ ಪಾಪಗಳನ್ನು ಕ್ಷಮಿಸಿ ಅವರನ್ನು ಶುದ್ಧಪಡಿಸುತ್ತಿದ್ದನು. ನಿಷ್ಠರಾಗದವರನ್ನು ಕುಲದಿಂದ ತೆಗೆದು ಹಾಕಿಸುತ್ತಿದ್ದನು (ಯಾ.ಕಾಂಡ 16:30 ಮತ್ತು ಯಾ.ಕಾಂಡ 23:29,30ನೇ ವಚನಗಳು).

**ಸಾರಾಂಶ :** ಜನರಿಗೆ ಭದ್ರತೆಯಿಲ್ಲದೆ ಸಂದರ್ಭದಲ್ಲಿ ನಿರ್ಬಲವಾದ ಮಾನವ ನಾಯಕತ್ವವು ನೋವಿನ ಸಂಗತಿ, ಅಂತಹ ಕಾಲದಲ್ಲಿ ಯೆಶಾಯನಿಗೆ ಈ ವಿಶ್ವದ ಪರಮನಾಯಕನಾದ ದೇವರ ದರ್ಶನ ಕೊಡಲ್ಪಟ್ಟಿತು. ಯೆಶಾಯನು ತನ್ನಲ್ಲಿನ ಕೊರತೆಯಿಂದ ದಿಗಿಲು (ಭೀತಿ) ಪಟ್ಟುಕೊಂಡಾಗ ಆತನನ್ನು ದೇವರು ಶುದ್ಧಪಡಿಸಿ ಕರುಣೆಯಿಂದ ಬಲಪಡಿಸಿದನು. ಆವಾಗ ಯೆಶಾಯನು ದೇವರ ರಾಯಭಾರಿಯಾಗಿ ಈ ಲೋಕದ ಜನರ ಬಳಿ ಹೋಗುವುದಕ್ಕೆ ಸಿದ್ಧಗೊಂಡನು.